**OS NO:1521/2013**
**DW.2**

**ದಿನಾಂಕಃ 31.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀನಿವಾಸ್, 1 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು 7 ನೇ ತರಗತಿ ವರೆಗೆ ಓದಿದ್ದೇನೆ. ನನಗೆ ಅಲ್ಪ ಸ್ವಲ್ಪ ಇಂಗ್ಲೀಷ್ ಓದಲು ಬರುತ್ತದೆ. ದಾವಾ ಆಸ್ತಿ ಐಟಂ.ನಂ.12 ಅನ್ನು ನಾನು ಹನುಮಂತಯ್ಯ ನಿಂದ 2012 ರಲ್ಲಿ ಖರೀದಿಸಿದ್ದೇನೆ. ಹನುಮಂತಯ್ಯ ಈ ಆಸ್ತಿ ಖರೀದಿಸುವಾಗಲೇ ನನಗೆ ಪರಿಚಯವಾಗಿದ್ದ. ಸದರಿ ಆಸ್ತಿ ಖರಿದಿಸುವ ಮುಂಚೆ ಕ್ರಯದ ಕರಾರು ಮಾಡಿಕೊಂಡಿದ್ದೆ. ಸದರಿ ಆಸ್ತಿ ಮೂಲತಃ ಹನುಮಂತಯ್ಯನ ಹೆಂಡತಿ ಚಿಕ್ಕತಿಮ್ಮಮ್ಮಳಿಗೆ ಸೇರಿತ್ತು. ಹನುಮಂತಯ್ಯ ಮತ್ತು ಚಿಕ್ಕತಿಮ್ಮಮ್ಮಳಿಗೆ ಮೂರು ಜನ ಮಕ್ಕಳು. ಈ ಆಸ್ತಿಯ ಮಾರಾಟದ ಮಾತುಕತೆಯ ಕಾಲಕ್ಕೆ ಹನುಮಂತಯ್ಯ ಮತ್ತು ಚಿಕ್ಕತಿಮ್ಮಮ್ಮ ಇವರ ಮೂರು ಜನ ಮಕ್ಕಳು ಇದ್ದರು. ಅವರು ದಾವೆಯ ವಾದಿ ಮತ್ತು ಪ್ರತಿವಾದಿ 1 ಮತ್ತು 2 ಎಂದರೆ ಭಾಸ್ಕರ್, ಬಾಬುರಾಜ್ ಮತ್ತು ಮಮತಾ. ಈ ಮೂರು ಜನರನ್ನು ನಾನು ನೋಡಿದ್ದೇನೆ. ಕ್ರಯಪತ್ರದ ಕಾಲಕ್ಕೆ ಭಾಸ್ಕರ್ ಸುಮಾರು 25 ವಯಸ್ಸಿನವನಾಗಿದ್ದ, ಬಾಬುರಾಜ್ ಸುಮಾರು 27 ವಯಸ್ಸಿನವನಾಗಿದ್ದ ಮತ್ತು ಮಮತಾಗೆ ಸುಮಾರು 21 ವಯಸ್ಸಾಗಿತ್ತು.

ಐದು ಲಕ್ಷ ರೂಪಾಯಿಗೆ ಈ ಆಸ್ತಿಯನ್ನು ಖರಿದಿಸಿದ್ದೇನೆ. ಮೂರು ಲಕ್ಷದ ಒಂದು ಸಾವಿರ ರೂಪಾಯಿ ಚೆಕ್ ಮೂಲಕ ಹಾಗೂ ಎರಡು ಲಕ್ಷ ನಗದು ಕೊಟ್ಟಿದ್ದೇನೆ. ಒಡವೆ ಮಾರಿ ಮತ್ತು ನನ್ನ ಗಂಡ ಕೊಟ್ಟ ಹಣದಿಂದ ಸದರಿ ಆಸ್ತಿ ಖರೀದಿಸಿದ್ದೇನೆ. ಹಣ ಸಂಗ್ರಹಣದ ಕುರಿತು ದಾಖಲೆ ಇರುವುದಿಲ್ಲ. ಅಸ್ತಿ ಖರೀದಿ ಪತ್ರದ ಕಾಲಕ್ಕೆ ನಾನು, ನನ್ನ ಗಂಡ, ಹನುಮಂತಯ್ಯ ಮತ್ತು ಹನುಮಂತಯ್ಯನ ಮಕ್ಕಳು ಸೇರಿದ್ದೆವು. ಆಸ್ತಿ ಖರೀದಿಸುವ ಮುಂಚೆ ವಕೀಲರ ಸಲಹೆ ಪಡೆದಿದ್ದೇನೊ ಇಲ್ಲವೋ ನನಗೆ ಗೊತ್ತಿಲ್ಲ. ಆ ಕಾಲಕ್ಕೆ 2 ನೇ ಪ್ರತಿವಾದಿಯ ಮದುವೆ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಆಸ್ತಿ ಖರೀದಿಸುವ ಕಾಲಕ್ಕೆ ಮೂಲ ದಾಖಲೆಗಳನ್ನು ಪಡೆದಿದ್ದೆನು. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಚಿಕ್ಕತಿಮ್ಮಮ್ಮಳ ಹೆಸರಿಗೆ

ಇದ್ದ ಮೂಲ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಅನ್ನುವುದು ಸರಿಯಲ್ಲ.

ನಿಪಿ.15 ದಾಖಲೆಯನ್ನು ಸಾಕ್ಷಿಗೆ ತೋರಿಸಿದಾಗ ಇದರ ಮೇಲೆ ಹನುಮಂತಯ್ಯನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**